ದಿಃ 04.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಡಿ ವಕೀಲರಿಂದ ,**

1. ಲಕ್ಷ್ಮಣಪ್ಪನವರಿಗೆ 5 ಜನ ಮಕ್ಕಳು. ಲಕ್ಷ್ಮಣಪ್ಪನವರವ ವಂಶದವರೇಲ್ಲರನ್ನು ವಂಶವೃಕ್ಷದಲ್ಲಿ ತೋರಿಸಿರುತ್ತೇನೆ. ಲಕ್ಷ್ಮಣಪ್ಪ ಮೂಲತಹಃ ಸೀತಾರಾಮಪುರದವರು. ಲಕ್ಷ್ಮಣಪ್ಪ ಮೂಲದವರು ಹೊನ್ನಾಳ್ಳಿ ತಾ. ಕಲ್ಲಕಟ್ಟೆ ಊರಿನವರು ಎಂದರೆ ಸರಿ. ಎಷ್ಟು ವರ್ಷಗಳ ಹಿಂದೆ ಸೀತಾರಾಮಪುರಕ್ಕೆ ಬಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಲಕ್ಷ್ಮಣಪ್ಪನವರು ಕೂಡ್ಲಿಗೇರೆ ಗ್ರಾಮದ ಸರ್ವೆ ನಂ. 138 ರಲ್ಲಿ 3 ಎಕರೆ 26 ಗುಂಟೆ ಜಮೀನನ್ನು ಖರೀದಿ ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸದರಿ ಜಮೀನನ್ನು ನಾನು ನೋಡಿರುತ್ತೇನೆ. ಲಕ್ಷ್ಮಣಪ್ಪನವರು ಕೂಡ್ಲಿಗೇರೆ ಗ್ರಾಮದ ಸರ್ವೆ ನಂ. 137 ರಲ್ಲಿ 01 ಎಕರೆ 01 ಗುಂಟೆ ಜಮೀನನ್ನು ಖರೀದಿ ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸದರಿ ಜಮೀನನ್ನು ನಾನು ನೋಡಿರುತ್ತೇನೆ.

2. 2009 ರಲ್ಲಿ ಲಕ್ಷ್ಮಣಪ್ಪನವರು ಮೃತ ಪಟ್ಟಿರುತ್ತಾರೆ. ಲಕ್ಷ್ಮಣಪ್ಪನವರು ಜೀವಿತಾ ಕಾಲದಲ್ಲಿ ಕೃಷ್ಣಮೂರ್ತಿ ಮತ್ತು ಶಾರದವರಿಗೆ ಮಾತ್ರ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ರಂಗಪ್ಪ ಮತ್ತು ಚಂದ್ರಪ್ಪ ಲಕ್ಷ್ಮಣಪ್ಪನವರ ಜೊತೆಯಲ್ಲಿ ವಾಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ರಂಗಪ್ಪ ಮತ್ತು ಚಂದ್ರಪ್ಪ ಲಕ್ಷ್ಮಣಪ್ಪನವರ ಜೊತೆಯಲ್ಲಿ ವಾಸ ಮಾಡುತ್ತಿರಲಿಲ್ಲ ಮತ್ತು ಕುಟುಂಬಕ್ಕೆ ಅವರಿಗೆ ಯಾವುದೇ ಸಹಕಾರ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ.

3. ನನ್ನ ಗಂಡನ ಹೆಸರು ರಂಗಪ್ಪ. ನಾನು ಭದ್ರಾವತಿ ತಾ. ಹತ್ತಿಗುಂದ ಗ್ರಾಮದವಳು. ನಾನು ಬೆಂಗಳೂರಿನಲ್ಲೆ ಕೆಲಸ ಮಾಡಿಕೊಂಡು ಅಲ್ಲೆ ವಾಸವಾಗಿದ್ದೆ ಎಂದರೆ ಸರಿಯಲ್ಲ. ಸೀತಾರಾಮಪುರದ ಆಂಜನೇಯ ದೇವಸ್ಥಾನದಲ್ಲಿ 1998 ರಲ್ಲಿ ನನ್ನ ಮದುವೆಯಾಗಿರುತ್ತದೆ. ನಾನು ಹೇಳಿದ ಹಾಗೆ ದೇವಸ್ಥಾನದಲ್ಲಿ ಮದುವೆಯಾಗಿರುವುದಿಲ್ಲ ನಾನು ಮತ್ತು ರಂಗಪ್ಪ ಎಲ್ಲೋ ಮದುವೆಯಾಗಿರುತ್ತೇವೆ ಎಂದು ಹೇಳಿ ಕೊಂಡು ಓಡಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಲಕ್ಷ್ಮಣಪ್ಪ ಮತ್ತು ಅವರು ಕುಟುಂಬದವರು ನನ್ನನ್ನು ಮತ್ತು ರಂಗಪ್ಪನವರನ್ನು ಗಂಡ ಹೆಂಡತಿ ಎಂದು ಹೇಳಿ ಪರಿಗಣಿಸಿರಲಿಲ್ಲ ಮತ್ತು ಕುಟುಂಬಕ್ಕೆ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ. 2007 ರಲ್ಲಿ ರಂಗಪ್ಪ ಮೃತ ಪಟ್ಟಿರುತ್ತಾರೆ. ನಾನು ರಂಗಪ್ಪನ ಹೆಂಡತಿ ಅಲ್ಲ ಮತ್ತು ರಿತೀಶ್ ನನ್ನ ಮಗನಲ್ಲ ಎಂದರೆ ಸರಿಯಲ್ಲ. ನಮ್ಮ ಜಾತಿಯ ಸಮಾಜ ನನ್ನನ್ನು ಮತ್ತು ರಂಗಪ್ಪನನ್ನು ಗಂಡ ಹೆಂಡತಿ ಎಂದು ಹೇಳಿ ಒಪ್ಪಿರಲಿಲ್ಲ ಎಂದರೆ ಸರಿ. ನಾನು ಮತ್ತು ರಂಗಪ್ಪ ಲಿಂಗಾಯಿತಾ ಜನಾಂಗಕ್ಕೆ ಸೇರಿರುತ್ತೇವೆ. ರಂಗಪ್ಪ ಲಿಂಗಾಯಿತಾ ಜನಾಂಗಕ್ಕೆ ಸೇರಿಲ್ಲ ಎಂದರೆ ಸರಿಯಲ್ಲ. ನಾನು ಬೇರೆ ಜಾತಿಯವಳಾದ ಕಾರಣ ನಮ್ಮನ್ನು ಎಂದೂ ಗಂಡ ಹೆಂಡತಿ ಎಂದು ಹೇಳಿ ಒಪ್ಪಿರಲಿಲ್ಲ ಎಂದರೆ ಸರಿಯಲ್ಲ.

4. ಮದುವೆಯಾದ ನಂತರ ನಾನು ಲಕ್ಷ್ಮಣಪ್ಪನವರ ಮನೆಯಲ್ಲೆ ವಾಸ ಮಾಡುತ್ತಿದ್ದೆ. ಅಲ್ಲಿ ವಾಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಇರುತ್ತದೆ ನಾನು ಪಡಿತರ ಚೀಟಿ ಮತ್ತು ಚುನಾವಣಾ ಗುರುತಿನ ಚೀಟಿಯನ್ನುನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ದಾಖಲೆಗಳನ್ನು ಸುಳ್ಳು ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮದುವೆಯಾಗುವ ಸಮಯದಲ್ಲಿ ಆಂಜನೆಯ ಸ್ವಾಮಿ ದೇವಸ್ಥಾನದಲ್ಲಿ ಮದುವೆಯ ಬಗ್ಗೆ ಯಾವುದೇ ದಾಖಲೆ

ಇಟ್ಟಿರಲಿಲ್ಲ. ನನ್ನ ಮದುವೆ ಆಂಜನೆಯ ಸ್ವಾಮಿ ದೇವಸ್ಥಾನದಲ್ಲಿ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಕಣಕಟ್ಟೆ ಗ್ರಾಮದಲ್ಲಿ ವಾಸವಾಗಿರುವುದಿಲ್ಲ, ಸೀತಾರಾಮಪುರದಲ್ಲಿ ವಾಸವಾಗಿರುತ್ತೇನೆ.

**ಮುಂದುವರಿಂದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ